# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, 10 ಜೂನ್ 2017, ಬೆಂಗಳೂರು, ಸಂಪುಟ 3, ಸಂಚಿಕೆ 2, ಪುಟಗಳು-4. ಸಂಪಾದಕರು : ಜಿ.ಟಿ.ಗೋವಿಂದಪ್ಪ
Kannada monthly, 10 June 2017, Bangaluru, Vol. 3, No.2, Pages-4, KARKAN2015/68727 Editor: G.T. Govindappa.

ಚಂದ: ವಾರ್ಷಿಕ ರೂ. 30, ಆಜೀವ : ರೂ. 500. Subscription :Annual Rs. 30; Life : Rs. 500/-
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್. Published by: Karnataka Vipassana Prachara Samiti Trust.


## ಧಮ್ಮ ಪದಗಳು

ಅತ್ತನಾ ಹಿ, ಕತಂ ಪಾಪಂ, ಅತ್ತನಾ ಸಂಕಿಲಿಸ್ಸತಿ;
ಅತ್ತನಾ ಅಕತಂ ಪಾಪಂ, ಅತ್ತನಾವ ವಿಸುಜ್ಝತಿ;
ಸುದ್ಧೀ ಅಸುದ್ಧಿ ಪಚ್ಚತ್ತಂ, ನಾನ್ಯೋ ಅನ್ಯಂ,
ವಿಸೋಧಯೇ.

ತಾನಾಗಿಯೇ ಒಬ್ಬನು ಪಾಪವನ್ನು ಮಾಡುತ್ತಾನೆ. ಅಂತೆಯೇ ತಾನಾಗಿಯೇ ಅವನು ಅಶುಚಿಯಾಗುತ್ತಾನೆ. ತಾನಾಗಿಯೇ ಒಬ್ಬನು ಪಾಪವನ್ನು ಮಾಡದೆ ಉಳಿಯುತ್ತಾನೆ. ಅಂತೆಯೇ ತಾನಾಗಿಯೇ ಅವನು ಶುಚಿವಂತನಾಗುತ್ತಾನೆ. ಶುದ್ಧಿ ಅಶುದ್ಧಿಗಳು ಅವನನ್ನೇ ಅವಲಂಬಿಸಿವೆ. ಒಬ್ಬನು ಮತ್ತೊಬ್ಬನನ್ನು ಶುದ್ಧಿಗೊಳಿಸಲಾರ.

**ಧಮ್ಮ ಪದ – 165, ಅತ್ತವಗ್ಗೋ**

# ಮಲಿನತೆಗಳಿಂದ ಮುಕ್ತಿಯೇ ದುಃಖದಿಂದ ಮುಕ್ತಿ
## –ಆಚಾರ್ಯ ಎಸ್.ಎನ್. ಗೋಯಂಕ (1924–2013)

(ಪ್ರಧಾನ ಆಚಾರ್ಯರಾದ ಶ್ರೀ ಎಸ್. ಎನ್. ಗೋಯಂಕಾಜಿಯವರು ಮಹಾರಾಷ್ಟ್ರದ ನಾಸಿಕ್‌ನ ರಮಾಬಾಯಿ ಅಂಬೇಡ್ಕರ್ ಹೆಣ್ಣು ಮಕ್ಕಳ ಪ್ರೌಢಶಾಲೆಯಲ್ಲಿ 1998 ರಲ್ಲಿ 3 ದಿನಗಳ ಕಾಲ ಸಾರ್ವಜನಿಕ ಪ್ರವಚನ ನೀಡಿದರು. ಇದು ಮೂರನೆಯ ದಿನದ ಪ್ರವಚನದ ಮೊದಲ ಭಾಗ. ಜುಲೈ, 2016 ರ ಇಂಗ್ಲೀಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ. ಮೊದಲ ದಿನದ ಪ್ರವಚನದ ಭಾಗ ಒಂದನ್ನು ಡಿಸೆಂಬರ್, 2016, ಭಾಗ ಎರಡನ್ನು ಜನವರಿ, 2017, ಎರಡನೆಯ ದಿನದ ಭಾಗ ಒಂದನ್ನು ಫೆಬ್ರವರಿ, 2017, ಭಾಗ ಎರಡನ್ನು ಮಾರ್ಚ್–ಏಪ್ರಿಲ್, 2017 ರ 'ವಿಪಶ್ಯನ ವಾರ್ತೆ'ಯಲ್ಲಿ ಪ್ರಕಟಿಸಲಾಗಿದೆ.)

ಪವಿತ್ರ ಭೂಮಿ ನಾಸಿಕ್‌ನ ಧಮ್ಮ ಪ್ರೇಮಿ ನಾಗರಿಕರಿಗೆ ಶುಭಾಶಯಗಳು.

ಕಳೆದ ಎರಡು ದಿನಗಳಿಂದ ಧರ್ಮವೆಂದರೇನು ಎಂಬುದನ್ನು ಅರ್ಥ ಮಾಡಿಕೊಳ್ಳಲು ನಾವು ಪ್ರಯತ್ನಿಸಿದ್ದೇವೆ. ಧರ್ಮದ ಹೆಸರಿನಲ್ಲಿ ಎಷ್ಟೊಂದು ಭ್ರಾಂತಿ ಮತ್ತು ತಪ್ಪು ತಿಳುವಳಿಕೆ ಇದೆಯೆಂದರೆ ಅದು ವ್ಯಕ್ತಿಯನ್ನು ಗೊಂದಲಕ್ಕೀಡು ಮಾಡುತ್ತದೆ. ಒಬ್ಬ ವ್ಯಕ್ತಿಯು ತಾನೊಬ್ಬ ಧಾರ್ಮಿಕ ವ್ಯಕ್ತಿಯೆಂಬ ಭ್ರಾಂತಿಯಿಂದ ಇಡೀ ಜೀವನವನ್ನು ಕಳೆಯಬಹುದು. ಆದರೆ ಆ ವ್ಯಕ್ತಿಯಲ್ಲಿ ಎಳ್ಳಷ್ಟೂ ಧರ್ಮವಿಲ್ಲದಿರುವ ಸಂಪೂರ್ಣ ಸಾಧ್ಯತೆಯಿದೆ. ಅಂತಹ ಭ್ರಾಂತಿ!

ವಿವಿಧ ಸಾಮಾಜಿಕ ಸಮುದಾಯಗಳು ತಮ್ಮವೇ ಆದ ಸಂಪ್ರದಾಯಗಳು, ಹಬ್ಬಗಳು, ಉಪವಾಸಗಳು ಮತ್ತು ಹಬ್ಬದೂಟಗಳು, ಧಾರ್ಮಿಕ ವಿಧಿಗಳು ಮತ್ತು ನಿತ್ಯಾಚರಣೆಗಳನ್ನು ಹೊಂದಿವೆ. ಇವೆಲ್ಲಕ್ಕಿಂತ ಮಿಗಿಲಾಗಿ ತಮ್ಮವೇ ಆದ ತತ್ವಶಾಸ್ತ್ರಗಳನ್ನು ಹೊಂದಿವೆ. ಇವುಗಳು ಧರ್ಮದ ಜೊತೆ ಯಾವುದೇ ರೀತಿಯ ಸಂಬಂಧಗಳನ್ನು ಹೊಂದಿಲ್ಲ. ಆದರೂ ಈ ಮತಾಚರಣೆಗಳನ್ನು ಮಾಡುವುದರಿಂದ ನಾವು ಬಹಳ ಧಾರ್ಮಿಕರು ಎಂದು ಜನರು ನಂಬುತ್ತಾರೆ.

ಯಾವಾಗ ಪರಿಶುದ್ಧ ಧರ್ಮವು ಮಾನವರಲ್ಲಿ ಜಾಗೃತವಾಗುತ್ತದೆಯೋ ಆಗ ಧರ್ಮವೆಂದರೆ ಶುದ್ಧವಾದ ಮನಸ್ಸಿನಿಂದ ತಾವು ವರ್ತಿಸುವ ವಿಧಾನವೆಂದು ಅವರು ಅರ್ಥಮಾಡಿಕೊಳ್ಳಲು ಪ್ರಾರಂಭಿಸುತ್ತಾರೆ. ಆದರೆ ವ್ಯಕ್ತಿಯ ಮನಸ್ಸು ಶುದ್ಧವಿಲ್ಲದಿದ್ದರೆ ಅಥವಾ ಅವನು ಮಾಡುವ ಕ್ರಿಯೆಗಳು ಶುದ್ಧ ಮನಸ್ಸನ್ನು ಆಧರಿಸಿಲ್ಲದಿದ್ದರೆ, ನಿಜವಾಗಿ ಅಂತಹ ವ್ಯಕ್ತಿಯನ್ನು ಧಾರ್ಮಿಕ ವ್ಯಕ್ತಿಯೆಂದು ಕರೆಯಬಹುದೇ? ಕೇವಲ ಕೆಲವು ಧಾರ್ಮಿಕ ವಿಧಿಗಳನ್ನು ಅನುಸರಿಸಿ, ನಿಗದಿಯಾದ ಬಟ್ಟೆಗಳನ್ನು ಧರಿಸಿ, ನಿಗದಿತ ಹಬ್ಬಗಳಿಗೆ ಹಾಜರಾಗಿ ಮತ್ತು ನಿಗದಿತ ತತ್ವಗಳನ್ನು ನಂಬುವುದರಿಂದ ವ್ಯಕ್ತಿಯು ಧಾರ್ಮಿಕನಾಗಲು ಸಾಧ್ಯವೇ? ವ್ಯಕ್ತಿಯು ಮತಾಚರಣೆಗಳನ್ನು ಮತ್ತು ಅಂತಹ ಪ್ರಯತ್ನಗಳನ್ನು ಮಾಡಿದಾಗ್ಯೂ ಮಲಿನತೆಗಳು ಇನ್ನೂ ಇರುತ್ತವೆ. ರಾಗ, ದ್ವೇಷ, ಕಡು ಹಗೆತನ, ದುರಹಂಕಾರ ಮತ್ತು ಭಯ ಮನಸ್ಸಿನಲ್ಲಿ ಬರುತ್ತಲೇ ಇರುತ್ತವೆ. ಇಷ್ಟೊಂದು ಮಲಿನತೆಗಳು ಮನಸ್ಸಿನಲ್ಲಿ ಉಕ್ಕಿ ಬರುವುದರಿಂದ ವ್ಯಕ್ತಿಯು ಸಮತೆ, ಶಾಂತಿ, ಸಂತೋಷ ಮತ್ತು ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುತ್ತಿರುತ್ತಾನೆ. ಸಂತೋಷದಾಯಕ ಚಟುವಟಿಕೆಯಲ್ಲಿ ಸ್ವಲ್ಪ ಹೊತ್ತು ಮನಸ್ಸನ್ನು ತೊಡಗಿಸಿ, ಶಾಂತವಾಗಿದ್ದೇನೆ ಎಂದು ವ್ಯಕ್ತಿಯು ತನ್ನನ್ನು ತಾನು ಸಮಾಧಾನಪಡಿಸಿಕೊಳ್ಳಬಹುದು. ಆದರೆ ತನ್ನೊಳಗೆ ಈ ನಕಾರಾತ್ಮಕತೆಗಳ ಹೊರೆಯನ್ನು ಹೊತ್ತುಕೊಂಡು ಓಡಾಡುತ್ತಿದ್ದರೆ ಯಾವುದಾದರೂ ಮಲಿನತೆ ಮನಸ್ಸಿನ ಮೇಲೆ ಬಂದು ವ್ಯಕ್ತಿಯನ್ನು ತಳಮಳಕ್ಕೀಡುಮಾಡುತ್ತದೆ. ಆಗ ಅಲ್ಲಿ ಶಾಂತಿ ಇರುವುದಿಲ್ಲ.

ಈ ಕಾರಣಕ್ಕಾಗಿ ಹತಾಶಾಭಾವನೆಯ ಅವಶ್ಯಕತೆಯಿಲ್ಲ. ನಾನಿನ್ನೂ ಧಾರ್ಮಿಕನಾಗಬೇಕಾಗಿದೆ ಎಂಬ ಸತ್ಯವನ್ನು ಕೇವಲ ಒಪ್ಪಿಕೊಳ್ಳಿ. ನಾನು ಈ ಮಲಿನತೆಗಳಿಂದ ಮುಕ್ತನಾಗುವುದಕ್ಕೆ ಪ್ರಯತ್ನ ಮಾಡಬೇಕು. ಅವುಗಳಿಂದ ಮುಕ್ತನಾಗದ ಹೊರತು ನಾನು ಧಾರ್ಮಿಕನಾಗಲು ಸಾಧ್ಯವಿಲ್ಲ. ಅವುಗಳಿಂದ ನಾನು ಎಷ್ಟರ ಮಟ್ಟಿಗೆ ಮುಕ್ತನಾಗುವೆನೋ ಅಷ್ಟರ ಮಟ್ಟಿಗೆ ನಾನು ಧಾರ್ಮಿಕನಾಗುತ್ತೇನೆ. ಇದೊಂದೇ ಏಕೈಕ ಮಾನದಂಡ. ವ್ಯಕ್ತಿಯು ಇದನ್ನು ಅರ್ಥ ಮಾಡಿಕೊಂಡಾಗ ಮಾತ್ರ ಅಲ್ಲಿ ಭ್ರಮೆಯಿರುವುದಿಲ್ಲ.

ನಿಸ್ಸಂದೇಹವಾಗಿ, ವ್ಯಕ್ತಿಯು ತನ್ನ ಸಮುದಾಯದ ಧಾರ್ಮಿಕ ವಿಧಿ, ರೂಢಿಗತ ಆಚರಣೆಗಳನ್ನು ಮತ್ತು ಹಬ್ಬಗಳನ್ನು ಸಮುದಾಯದ ಸಂತೋಷಕ್ಕಾಗಿ ಆಚರಿಸುವುದನ್ನು ಮುಂದುವರಿಸಬಹುದು. ಅದರಲ್ಲಿ ತಪ್ಪಿಲ್ಲ. ಆದರೆ ತನ್ನ ನಡವಳಿಕೆ, ಸ್ವಭಾವದಲ್ಲಿ ಏನಾದರೂ ಬದಲಾವಣೆ ಬರುತ್ತಿದೆಯೇ ಅಥವಾ ಇಲ್ಲವೇ; ಕೋಪ, ಬದ್ಧ ದ್ವೇಷ, ಅಂಟಿಕೊಳ್ಳುವಿಕೆ ಮತ್ತು ಅಹಂಕಾರ ಇವುಗಳ ಹಿಡಿತ ಕಡಿಮೆಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರೀಕ್ಷಿಸುವುದು ಮುಖ್ಯ. ಎಷ್ಟರ ಮಟ್ಟಿಗೆ ಇವು ಕಡಿಮೆಯಾಗಿವೆಯೋ ಅಷ್ಟರ ಮಟ್ಟಿಗೆ ವ್ಯಕ್ತಿಯು ಧಾರ್ಮಿಕನಾಗಿದ್ದಾನೆ. ತಳಮಳ ಮತ್ತು ದುಃಖದಿಂದ ಮುಕ್ತನಾಗಿದ್ದಾನೆ.

ಈ ಹಿಂದೆ ನಾನು ಏನನ್ನು ಹೇಳಿದ್ದೆನೋ ಅದನ್ನು ಮತ್ತೊಮ್ಮೆ ಹೇಳುತ್ತೇನೆ. ಭಾರತದ ಪುರಾತನ ನಂಬಿಕೆಯ ಪ್ರಕಾರ ಧರ್ಮದ ಸ್ವಭಾವ ಏನು? ಸರಳವಾಗಿ ಹೇಳುವುದಾದರೆ, ಧರ್ಮವು ಮನಸ್ಸಿನಲ್ಲಿ ಪಸರಿಸಿಕೊಂಡಿದ್ದರೆ, ಆಗ ತಳಮಳ, ದುಃಖ ಮತ್ತು ಅಶಾಂತತೆ ಪ್ರವೇಶಿಸಲು ಸಾಧ್ಯವಿಲ್ಲ. ನಮ್ಮೊಳಗೆ ದೀಪವನ್ನು ಹೊತ್ತಿಸಿದಾಗ ಬೆಳಕಿನ ಜೊತೆಗೆ ಕತ್ತಲು ಇರಲು ಸಾಧ್ಯವಿಲ್ಲ. ಇದು ಆಗಲು ಸಾಧ್ಯವಿಲ್ಲ. ಬೆಳಕು ಬಂದಾಗ ಕತ್ತಲು ಹೋಗಲೇಬೇಕು. ಕತ್ತಲೆಗೆ ನೀನು ಹೋಗು ಎಂದು ಹೇಳುವ ಅವಶ್ಯಕತೆಯಿಲ್ಲ. ಅದೇ ತರಹ, ಧರ್ಮವು ಜಾಗೃತಗೊಂಡಾಗ ತಳಮಳ, ದುಃಖ ಮತ್ತು ಅಶಾಂತಿ ಹೋಗಲೇಬೇಕು. ಇದು ಧರ್ಮದ ಸ್ವಭಾವ. ಇದೇ ಧರ್ಮದ ಮಾನದಂಡ. ಈ ಮಾನದಂಡದಿಂದ ತನ್ನನ್ನೇ ತಾನು ಅಳತೆ ಮಾಡಿಕೊಳ್ಳಲು ವ್ಯಕ್ತಿಯು ಯಾವಾಗ ಪ್ರಾರಂಭಿಸುತ್ತಾನೋ ಆಗ

ಜೀವನದ ಬಹಳ ಮುಖ್ಯವಾದ ಕೆಲಸವನ್ನು ಮಾಡಲು ಪ್ರಾರಂಭಿಸುತ್ತಾನೆ. ಆ ಕೆಲಸವೇ ಮನಸ್ಸಿನಿಂದ ಮಲಿನತೆಗಳನ್ನು ಹೊರ ತೆಗೆಯುವುದು.

ಮನಸ್ಸಿನ ಮೇಲ್ಭಾಗದ ಮಲಿನತೆಗಳನ್ನಷ್ಟೇ ತೆಗೆಯುವುದಲ್ಲ. ಅಂತರಾಳದಲ್ಲಿ ಹೇರಳವಾಗಿ ಶೇಖರಗೊಂಡಿರುವ ಮಲಿನತೆಗಳನ್ನು ವ್ಯಕ್ತಿಯು ತೆಗೆದುಹಾಕಬೇಕು. ಅಂತರಾಳದಲ್ಲಿಯೇ ಮನಸ್ಸಿನ ಅಭ್ಯಾಸದ ಮಾದರಿ ನೆಲೆಸಿರುವುದು. ಇಷ್ಟವಾದ ಸಣ್ಣ ಘಟನೆ ಸಂಭವಿಸಿದರೂ ರಾಗದ ಉರಿ ಹೊತ್ತಿಸಿ ಹೆಚ್ಚು ರಾಗವನ್ನುಂಟು ಮಾಡುತ್ತದೆ. ಹಾಗೆಯೇ ಇಷ್ಟವಿಲ್ಲದ ಸಣ್ಣ ಘಟನೆಯೂ ದ್ವೇಷದ ಪ್ರತಿಕ್ರಿಯೆಯನ್ನು, ಹೆಚ್ಚು ದ್ವೇಷವನ್ನು ಉಂಟು ಮಾಡುತ್ತದೆ. ಆದರೂ, ಈ ರೀತಿ ಪ್ರತಿಕ್ರಿಯೆ ಮಾಡುವ ವ್ಯಕ್ತಿಯು ನಾನು ಧಾರ್ಮಿಕ ಅಥವಾ ಧಾರ್ಮಿಕಳು ಎಂದು ಪರಿಗಣಿಸುತ್ತಾರೆ. ಏಕೆ? ಏಕೆಂದರೆ ತಾನು ಯಾವುದೋ ಒಂದು ಸಾಂಪ್ರದಾಯಿಕ ಉಡುಗೆ ತೊಟ್ಟಿದ್ದಾನೆ ಅಥವಾ ಕೆಲವು ಧಾರ್ಮಿಕ ನಿತ್ಯಾಚರಣೆಗಳನ್ನು ಮಾಡಿದ್ದಾನೆ. ಒಂದು ಗೊತ್ತಾದ ತತ್ವಶಾಸ್ತ್ರ, ಒಂದು ಗೊತ್ತಾದ ಸಿದ್ಧಾಂತವನ್ನು ನಂಬಿರುವ ವ್ಯಕ್ತಿಯು ಬಹಳ ಧಾರ್ಮಿಕ, ಮತ್ತು ಈ ತತ್ವಶಾಸ್ತ್ರ ಅಥವಾ ಈ ಸಿದ್ಧಾಂತವನ್ನು ನಂಬದಿರುವವರೆಲ್ಲ ಅಧಾರ್ಮಿಕರು ಎಂದು ವ್ಯಕ್ತಿಯು ಆಲೋಚಿಸಿದರೆ ಅದು ಇನ್ನೂ ಅಪಾಯಕಾರಿಯಾದುದು.

ಇದು ನಮ್ಮ ಮಾನದಂಡವಾಗಲು ಹೇಗೆ ಸಾಧ್ಯ? ಇದರ ಬಗ್ಗೆ ಆಲೋಚಿಸುವುದನ್ನು, ಬುದ್ಧಿವಂತಿಕೆಯಿಂದ ಚಿಂತಿಸುವುದನ್ನು ನಾವು ನಿಲ್ಲಿಸಿದ್ದು ಯಾವಾಗ? ಧರ್ಮದ ಹೆಸರಿನಲ್ಲಿ ಎಂತಹ ಕತ್ತಲೆ ಬಂದಿದೆ! ಧಮ್ಮದ ಬಗ್ಗೆ ವ್ಯಕ್ತಿಯು ಮಾತಾಡುತ್ತಾನೆ. ಆದರೆ ಅಲ್ಲಿ ಶಾಂತಿ ಮತ್ತು ಸಂತೋಷವಿಲ್ಲ, ಕೇವಲ ಒತ್ತಡ ಮತ್ತು ತಳಮಳವಿದೆ. ಹಾಗಾದರೆ, ಸ್ನೇಹಿತರೇ ಅದು ಧರ್ಮವಲ್ಲ, ಧರ್ಮದ ಹೆಸರಿನಲ್ಲಿ ಬರೀ ಭ್ರಾಂತಿ.

ಯಾವಾಗ ನಾವು ರಾಗ ಅಥವಾ ದ್ವೇಷವನ್ನು ಎಬ್ಬಿಸಿಕೊಳ್ಳುತ್ತೇವೋ, ಆಗ ನಾವು ಮನಸ್ಸಿನ ಸಮತೋಲನವನ್ನು ಮತ್ತು ಸಮತೆಯನ್ನು ಕಳೆದುಕೊಳ್ಳುತ್ತೇವೆ. ನಾವು ಮನಸ್ಸಿನ ಸಮತೋಲನವನ್ನು ಕಳೆದುಕೊಂಡ ತಕ್ಷಣ ತಳಮಳಕ್ಕೊಳಗಾಗುತ್ತೇವೆ. ಇದು ಪ್ರಕೃತಿಯ ನಿಯಮ. ಯಾರಾದರೂ ತನ್ನೊಳಗೆ ಯಾವುದೇ ನಕಾರಾತ್ಮಕತೆಯನ್ನು ಎಬ್ಬಿಸಿಕೊಳ್ಳಲಿ ಮತ್ತು ಏನಾಗುತ್ತದೆ ಎಂಬುದನ್ನು ನೋಡಲಿ. ಆದರೆ ನಮ್ಮೊಳಗೇ ನೋಡುವುದನ್ನು ನಾವು ಮರೆತಿದ್ದೇನೆ. ಹಾಗಾಗಿ ನಾವು ಏನನ್ನು ನೋಡಲು ಸಾಧ್ಯ?

ವ್ಯಕ್ತಿಯು ತನ್ನೊಳಗೆ ನೋಡುವುದನ್ನು ಕಲಿತರೆ, ಒಳಗೆ ಯಾವುದೇ ನಕಾರಾತ್ಮಕತೆ ಬಂದ ತಕ್ಷಣ, ತಳಮಳವೂ ಸಹ ಬರುತ್ತದೆ, ದುಃಖವೂ ಸಹ ಬರುತ್ತದೆ ಎಂಬುದನ್ನು ವ್ಯಕ್ತಿಯು ಅನುಭವ ಮಾಡಿಕೊಳ್ಳುತ್ತಾನೆ. ವ್ಯಕ್ತಿಯು ಧರ್ಮದಿಂದ ಎಷ್ಟು ದೂರ ಇದ್ದಾನೆ! ಆದರೆ ಈಗ ವ್ಯಕ್ತಿಯು ಈ ಮಲಿನತೆಗಳಿಂದ ಮುಕ್ತಿ ಪಡೆಯಲು ಪ್ರಯತ್ನ ಪ್ರಾರಂಭಿಸುತ್ತಾನೆ. ತನ್ನನ್ನು ಬಂಧಿಸಿರುವ ಈ ಅಭ್ಯಾಸವನ್ನು ಮುರಿಯಲು ವ್ಯಕ್ತಿಯು ಪ್ರಯತ್ನಿಸುತ್ತಾನೆ.

ಧರ್ಮವು ಸಾರ್ವತ್ರಿಕವಾದುದು ಮತ್ತು ಎಲ್ಲರಿಗೂ ಸೇರಿದ್ದು. ಪ್ರತಿಯೊಬ್ಬರ ಮನಸ್ಸಿನ ಸ್ವಭಾವವೂ ಒಂದೇ. ಮನಸ್ಸು ಮಲಿನತೆಗಳಿಂದ ತುಂಬಿದರೆ, ಅದು ತಳಮಳಕ್ಕೊಳಗಾಗುತ್ತದೆ. ಅದು ಮಲಿನತೆಗಳಿಂದ ಮುಕ್ತವಾದರೆ ಶಾಂತಿ ಮತ್ತು ಸಂತೋಷದಿಂದಿರುತ್ತದೆ. ಈ ನಿಯಮ ಎಲ್ಲರಿಗೂ ಅನ್ವಯಿಸುತ್ತದೆ. ವಿವಿಧ ಸಮುದಾಯಗಳ ವಿವಿಧ ಧಾರ್ಮಿಕ ವಿಧಿಗಳು, ನಿತ್ಯಾಚರಣೆಗಳು ಮತ್ತು ತತ್ವಶಾಸ್ತ್ರಗಳು ಇರಬಹುದು. ಅದರ ಬಗ್ಗೆ ವಿವಾದವಿಲ್ಲ. ಆದರೆ ಅದಕ್ಕೂ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ.

ಧರ್ಮದಲ್ಲಿ ಬೆಳೆಯುವುದು ಮುಖ್ಯ. ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗೆ ಈ ಕಾಯಿಲೆಯಿಂದ ಮುಕ್ತನಾಗುವುದು ಹೇಗೆ ಎಂಬುದನ್ನು ತಿಳಿಯುವುದು ಬಹಳ ಮುಖ್ಯ. ಯಾವ ಔಷಧಿ ಅವನನ್ನು ಕಾಯಿಲೆಯಿಂದ ಮುಕ್ತಗೊಳಿಸುತ್ತದೆ ಎಂಬ ವಿಷಯ ಮಾತ್ರ ಪ್ರಮುಖವಾಗುತ್ತದೆ. ನಮಗೆ ಔಷಧಿಯನ್ನು ಕೊಡಲಾಗಿದೆ. ಆದರೆ ಅದನ್ನು ನಾವು ಸೇವಿಸದಿದ್ದರೆ ಅದು ನಮ್ಮ ದೊಡ್ಡ ದೌರ್ಭಾಗ್ಯ. ಒಬ್ಬ ಮನುಷ್ಯ ಬಾಯಾರಿಕೆಯಿಂದ ಬಳಲುತ್ತಿದ್ದಾನೆ. ಅವನ ಹತ್ತಿರದಲ್ಲಿಯೇ ಒಂದು ಪಾತ್ರೆ ತುಂಬಾ ನೀರಿದೆ. ಅವನು ಅದರ ಬಳಿ ಕುಳಿತು, "ಓ ನೀರೇ, ನೀನು ಎಷ್ಟೊಂದು ಅದ್ಭುತ! ನೀನು ಜನರ ಬಾಯಾರಿಕೆಯನ್ನು ನೀಗಿಸುತ್ತೀಯ" ಎಂದು ಹೊಗಳುತ್ತಾನೆ. ಆದರೂ ಅವನು ಅದನ್ನು ಕುಡಿಯುವುದಿಲ್ಲ. ಹಸಿದಿರುವ ಮನುಷ್ಯನ ಬಳಿ ಒಂದು ದೊಡ್ಡ ತಟ್ಟೆಯಲ್ಲಿ ಊಟ ಇಡಲಾಗಿದೆ. ಅದನ್ನು ಊಟ ಮಾಡುವುದರ ಬದಲು ಕೈ ಮುಗಿದು ಅದನ್ನು ಹೊಗಳುತ್ತಾ, ಖಾಲಿ ಚರ್ಚೆಯಲ್ಲಿ ತೊಡಗುತ್ತಾನೆ. ಇದಕ್ಕಿಂತ ದುರದೃಷ್ಟಕರವಾದುದು ಯಾವುದಿದೆ? ಅದೇ ತರಹ ಅಸಂಬದ್ಧ ವಿಷಯಗಳಲ್ಲಿ, ಒಣ ಚರ್ಚೆಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಂಡು ಕೊನೆಯಿಲ್ಲದಂತೆ ಧರ್ಮವನ್ನು ಹೊಗಳುತ್ತೇವೆ. ಆದರೆ ಅದನ್ನು ಅಳವಡಿಸಿಕೊಳ್ಳುವುದಿಲ್ಲ. ಇದು ತುಂಬಾ ದುರದೃಷ್ಟಕರ.

"ನಾನು ನನ್ನ ಕಾಯಿಲೆಯಿಂದ, ಈ ಭವದ ದುಃಖದಿಂದ, ತಳಮಳ ಮತ್ತು ಅಶಾಂತಿಯಿಂದ ಹೊರ ಬರಲೇ ಬೇಕು. ಇದರಿಂದ ಹೊರ ಬರಲು ನಾನು ಏನಾದರೂ ಮಾಡಲೇಬೇಕು" ಎಂದು ಪ್ರತಿಯೊಬ್ಬ ವ್ಯಕ್ತಿಯೂ ಯೋಚಿಸುವ ಅಗತ್ಯವಿದೆ. ಮಾಡಬೇಕಾದ ಒಂದೇ ಒಂದು ಕೆಲಸವೆಂದರೆ, ಮನಸ್ಸಿನ ಮಲಿನತೆಗಳನ್ನು ತೊಲಗಿಸುವುದು ಹೇಗೆ ಎಂಬುದನ್ನು ತಿಳಿಯುವುದು. ಹೆಚ್ಚು ಹೆಚ್ಚಾಗಿ ಕೇವಲ ಮಲಿನತೆಗಳನ್ನು ಹುಟ್ಟು ಹಾಕುವ ಮನಸ್ಸಿನ ಮೂಲಭೂತ ಅಭ್ಯಾಸ ಕ್ರಮವನ್ನು ಬೇರು ಮಟ್ಟದಲ್ಲಿಯೇ ಬದಲಾಯಿಸಬೇಕು. ಖಂಡಿತವಾಗಿ ಪ್ರತಿಯೊಬ್ಬರೂ ಸಮಾಜದಲ್ಲಿ ತನ್ನ ಕುಟುಂಬದ ಜೊತೆ ಬದುಕಲೇಬೇಕು ಮತ್ತು ಅದು ಒಳ್ಳೆಯದು. ಆದರೆ, ತನ್ನ ಮಲಿನತೆಗಳಿಂದ ಹೊರ ಬರುವುದು ಹೇಗೆ ಎಂಬುದೇ ಪ್ರತಿಯೊಬ್ಬರಿಗೂ ಮುಖ್ಯವಾದ ವಿಷಯ.

ನಾನು ಧರ್ಮವನ್ನು ಅರಿಯಬೇಕು, ಧಾರ್ಮಿಕ ವಿಧಿಗಳು ಮತ್ತು ನಿತ್ಯಾಚರಣೆಗಳು ವ್ಯಕ್ತಿಯನ್ನು ಧಾರ್ಮಿಕನನ್ನಾಗಿ ಮಾಡುವುದಿಲ್ಲ ಎಂದು ಅರ್ಥ ಮಾಡಿಕೊಳ್ಳುವುದೇ ಒಂದು ಹೆಜ್ಜೆ ಮುಂದಿಟ್ಟಂತೆ. ತನ್ನನ್ನು ತಾನು ಮಲಿನತೆಗಳಿಂದ ಮುಕ್ತಗೊಳಿಸಿಕೊಳ್ಳಲು ಪ್ರಾರಂಭಿಸಿದ ದಿನ ಅವುಗಳಿಂದ ಮುಕ್ತನಾದಷ್ಟು ಮಟ್ಟಿಗೆ, ವ್ಯಕ್ತಿಯು ಧಾರ್ಮಿಕನಾಗಲು ಪ್ರಾರಂಭಿಸುತ್ತಾನೆ. ಒಂದು ದಿನದಲ್ಲಿ ವ್ಯಕ್ತಿಯು ಅನೇಕ ಸಾರಿ ಧಾರ್ಮಿಕನಾಗಬಹುದು ಅಥವಾ ಅಧಾರ್ಮಿಕನಾಗಬಹುದು. ಮಲಿನತೆಗಳು ಯಾವಾಗ ಬರುತ್ತವೆಯೋ ಆಗ ಅಧಾರ್ಮಿಕ ಮತ್ತು ಯಾವಾಗ ಶುದ್ಧತೆಯು ಪ್ರಕಟವಾಗುತ್ತದೆಯೋ ಆಗ ಅವನು ಧಾರ್ಮಿಕ. ಮಲಿನತೆಗಳಿಂದ ಮುಕ್ತಿಯೇ ದುಃಖದಿಂದ ಮುಕ್ತಿ. ಜೀವನದ ದುಃಖದಿಂದ ಮುಕ್ತಿಯೇ ಬಿಡುಗಡೆಯ ಮಾರ್ಗ. ವ್ಯಕ್ತಿಯು ಮಲಿನತೆಗಳಿಂದ ಮುಕ್ತನಾಗುತ್ತಿದ್ದಾನೆಯೇ ಎಂಬುದು ಧರ್ಮ ಮಾರ್ಗದಲ್ಲಿ ಅವನ ಪ್ರಗತಿಯನ್ನು ಅಳೆಯುವ ಏಕೈಕ ಮಾನದಂಡ.

ಮಲಿನತೆಗಳು ನಮ್ಮೊಳಗೇ ನೆಲೆಸಿರುವುದರಿಂದ ಹೊರಗಣ ಧಾರ್ಮಿಕ ವಿಧಿಗಳು ಮತ್ತು ನಿತ್ಯಾಚರಣೆಗಳು ಸಹಾಯ ಮಾಡುವುದಿಲ್ಲ. ಮಲಿನತೆಗಳು ಮತ್ತು ನಕಾರಾತ್ಮಕತೆಗಳು ಹೇಗೆ ಬರುತ್ತವೆ ಮತ್ತು ಹೇಗೆ ದ್ವಿಗುಣವಾಗುತ್ತವೆ ಎಂಬುದನ್ನು ನಿಮ್ಮೊಳಗೇ ಹೋಗಿ ಗಮನಿಸಿ. ಇದನ್ನು ನೀವು ನೋಡದಿದ್ದರೆ, ಅವುಗಳನ್ನು ನೀವು ಹೇಗೆ ನಿರ್ಮೂಲ ಮಾಡುತ್ತೀರಿ? ಒಂದು ನಿರ್ಧಿಷ್ಟ ಕೊಠಡಿ ಬಹಳ ಗಲೀಜಾಗಿದೆ, ಅದನ್ನು ಶುಚಿಗೊಳಿಸಬೇಕಾಗಿದೆ ಎಂದು ಯಾರೋ ನನಗೆ ಹೇಳುತ್ತಾರೆ. ನಾನು ಒಪ್ಪಿದರೂ, ನಾನು ಅಲ್ಲಿಗೆ ಹೋಗುವುದಿಲ್ಲ. ಹೊರಗಿನ ಹತ್ತಾರು ಇತರೆ ಚಟುವಟಿಕೆಗಳಲ್ಲಿ ತೊಡಗಿಕೊಂಡು ಕೊಠಡಿಯು ಹೇಗೋ ಶುಭ್ರವಾಗುತ್ತದೆ ಎಂದು ಆಶಿಸುತ್ತೇನೆ. ಅದು ಶುಭ್ರವಾಗಲು ಹೇಗೆ ಸಾಧ್ಯ?

ಮನಸ್ಸಿಗೂ ಇದೇ ಅನ್ವಯಿಸುತ್ತದೆ. ಮಲಿನತೆಗಳು ಮತ್ತು ನಕಾರಾತ್ಮಕ ನಡವಳಿಕೆಯ ಮಾದರಿ ಅಗಾಧವಾಗಿ ಮನಸ್ಸಿನ ಆಳದಲ್ಲಿ ಸಂಚಯಗೊಂಡಿರುತ್ತವೆ. ವ್ಯಕ್ತಿಯು ಅದನ್ನು ಬದಲಾಯಿಸಲು ಈ ಆಳಕ್ಕೆ ಹೋಗಿ ಗಂಭೀರ ಪ್ರಯತ್ನಮಾಡಬೇಕು. ಬೇರೆ ಯಾರೂ ನಮ್ಮ ಕೋರಿಕೆಯನ್ನು ಮನ್ನಿಸಿ ನಮಗಾಗಿ ಈ ಕೆಲಸವನ್ನು ಮಾಡುವುದಿಲ್ಲ. ಯಾರೋ ನಮ್ಮನ್ನು ಮುಕ್ತಗೊಳಿಸುತ್ತಾರೆ, ನಮ್ಮ ದುಃಖಗಳಿಂದ ಬಿಡುಗಡೆ ಮಾಡುತ್ತಾರೆ ಎಂಬ ನಂಬಿಕೆಯಿಂದ ಕಾಯುವ ಅಗತ್ಯವಿಲ್ಲ. ಇಡೀ ಜೀವಮಾನವೆಲ್ಲಾ ನಾವು ಕಾಯಬಹುದು. ಆದರೆ ಅದು ಆಗುವುದಿಲ್ಲ. ಒಂದು ನಿಮಿಷ ನಾವು ಯೋಚಿಸಿದರೆ ಅಂತಹ ಆಲೋಚನೆಯ ನಿರರ್ಥಕತೆಯನ್ನು ನಾವು ಕಾಣುತ್ತೇವೆ.

ಧರ್ಮವು ವೈಚಾರಿಕವಾಗಿ ಮತ್ತು ಬೌದ್ಧಿಕ ಮಟ್ಟದಲ್ಲೂ ಸಹ ನಂಬಿಕೆ ಹುಟ್ಟಿಸಬೇಕು. ತಾರ್ಕಿಕವಾಗಿ ಹೇಳುವುದಾದರೆ, ಧರ್ಮವೆಂದರೆ ವ್ಯಕ್ತಿಯು ಮಲಿನತೆಗಳನ್ನು ತೆಗೆದು ಹಾಕುವುದು ಎಂದು ತಿಳಿಯುವುದು, ಅವು ಹೇಗೆ ಬರುತ್ತವೆ ಮತ್ತು ದ್ವಿಗುಣಗೊಳ್ಳುತ್ತವೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು, ಮತ್ತು ಅವುಗಳು ವಾಸಿಸುತ್ತಿರುವ ಸ್ಥಳವನ್ನು ತಲುಪಿ ಅವುಗಳನ್ನು ಶುದ್ಧಿ ಮಾಡುವುದು. ಈ ಹಂತವನ್ನು ತಲುಪಿ ಭ್ರಮೆಯಿಂದ ಹೊರ ಬರುವುದು ಅತ್ಯಗತ್ಯ.

ಈ ಜ್ಞಾನವು ಈ ಉದ್ದೇಶಕ್ಕಾಗಿಯೇ ಉದಯವಾಗಿ ಶತಮಾನಗಳವರೆಗೆ

ಜನರಿಗೆ ಪ್ರಯೋಜನ ನೀಡುತ್ತದೆ ಎಂಬುದು ಭಾರತದ ಸಾವಿರಾರು ವರ್ಷಗಳ ಪುರಾತನ ಸಂಪ್ರದಾಯವಾಗಿದೆ. ದುರದೃಷ್ಟವಶಾತ್, ಇದು ನಂತರ ನಿರ್ದಿಷ್ಟ ರೀತಿಯ ಉಡುಪು ಮತ್ತು ತತ್ವಶಾಸ್ತ್ರವನ್ನು ಹೊಂದಿರುವ ಧಾರ್ಮಿಕ ವಿಧಿಗಳ ಜೊತೆ ಇದನ್ನು ಜೋಡಿಸುವ ಜನರ ಕೈ ಸೇರುತ್ತದೆ. "ಮನಸ್ಸನ್ನು ಶುದ್ಧಿ ಮಾಡುವುದು ಖಂಡಿತವಾಗಿ ಒಳ್ಳೆಯದು. ಆದರೆ 'ಈ' ಅಥವಾ 'ಆ' ಧಾರ್ಮಿಕ ವಿಧಿಯನ್ನೂ ಸಹ ಮಾಡು" ಎಂದು ಹೇಳುತ್ತಾರೆ. ಧಾರ್ಮಿಕ ವಿಧಿಗಳನ್ನು ಮಾಡುವುದು ಸುಲಭ. ಆದರೆ ತನ್ನೊಳಗೇ ಆಳಕ್ಕೆ ಹೋಗಿ ಮನಸ್ಸನ್ನು ಶುದ್ಧಿ ಮಾಡುವ ಕೆಲಸ ಮಾಡುವುದು ಕಷ್ಟ. ಕ್ರಮೇಣ ಈ ಧಾರ್ಮಿಕ ವಿಧಿಗಳ ಆಚರಣೆ ಪ್ರಮುಖವಾಗುತ್ತದೆ. ನಿಜವಾದ ಧರ್ಮದ ಅಭ್ಯಾಸವು ನೇಪಥ್ಯಕ್ಕೆ ಸರಿಯುತ್ತದೆ. ಆಂತರಿಕ ಶುದ್ಧೀಕರಣದ ಕೆಲಸ ನಿಧಾನವಾಗಿ ಕಳೆದು ಹೋಗುತ್ತದೆ ಮತ್ತು ಹೊರಗಣ ಅಂಶಗಳು ಮಾತ್ರ ಉಳಿಯುತ್ತವೆ.

ಈ ಮಹಾರಾಷ್ಟ್ರ ರಾಜ್ಯವು ಭಾರತಕ್ಕಷ್ಟೇ ಅಲ್ಲ, ಇಡೀ ವಿಶ್ವಕ್ಕೇ ಒಂದು ಕಲಿಕಾ ಕೇಂದ್ರವಾಗಿದ್ದ ಕಾಲವೊಂದಿತ್ತು. ನಿನ್ನೆ ತಿಳಿಸಿದಂತೆ, ಈ ಜ್ಞಾನವು ಮೊದಲು ಈ ದೇಶದಲ್ಲಿ 2600 ವರ್ಷಗಳ ಹಿಂದೆ ಉದಯವಾಗಿ ನಂತರ ಈ ಪ್ರದೇಶಕ್ಕೆ ಬಂದು ಹರಡಿತು. ಆ ಕಾಲದಲ್ಲಿ ಈ ಜ್ಞಾನವು ಅಪಾರ ಸಂಖ್ಯೆಯ ಜನಗಳಿಗೆ ಅಗಾಧವಾದ ಪ್ರಯೋಜನ ನೀಡುತ್ತಾ ಸಾಮಾನ್ಯ ಕುಟುಂಬಗಳ ಭಾಗವಾಗಿತ್ತು.

ಇದಾದ 300 ವರ್ಷಗಳ ನಂತರ ಅಶೋಕ ಚಕ್ರವರ್ತಿಯು ಅನೇಕ ವಿಪಶ್ಯನ ಆಚಾರ್ಯರನ್ನು ಭಾರತದ ನಾನಾ ಭಾಗಗಳಿಗೆ ಮತ್ತು ವಿದೇಶಗಳಿಗೂ ಕಳುಹಿಸಿದನು. "ನನಗೂ ಮತ್ತು ನನ್ನ ಜನರಿಗೂ ಸಹಾಯ ಮಾಡಿರುವ ಇಂತಹ ಒಳ್ಳೆಯ ಜ್ಞಾನವನ್ನು ಎಲ್ಲರಿಗೂ ಕೊಡಲೇಬೇಕು" ಎಂಬ ಭಾವನೆಯಿಂದ ಮಾತ್ರ ಈ ಕೆಲಸ ಮಾಡಿದ.

ಇಬ್ಬರು ಆಚಾರ್ಯರುಗಳು, ಮಹಾಧಮ್ಮರಕ್ಖಿತ ಥೇರ ಮತ್ತು ಮಹಾರಕ್ಖಿತ ಥೇರ, ಈ ಪಶ್ಚಿಮ ತೀರಗಳಿಗೆ ಬಂದು ಅದ್ಭುತವಾದ ಧಮ್ಮ ಸೇವೆಯನ್ನು ಮಾಡಿದರು. ಭಾರತದ ಈ ಭಾಗದಲ್ಲಿ ಅಷ್ಟೇ ಅಲ್ಲ, ಈ ತೀರಗಳಿಂದ ಆಚೆಗೂ ಧಮ್ಮ ಹರಡಲು ಸಹಾಯ ಮಾಡಿದರು. ಆ ದಿನಗಳಲ್ಲಿ, ಮಹಾರಾಷ್ಟ್ರದ ಸುಪಾರ ಮತ್ತು ಗುಜರಾತ್‌ನ ಕಚ್ ಪ್ರಾಂತ್ಯದ ಭರೂಚ್‌ನಲ್ಲಿ ದೊಡ್ಡ ಬಂದರುಗಳಿದ್ದವು. ಇವು ಶತಮಾನಗಳವರೆಗೆ ಅಂತರರಾಷ್ಟ್ರೀಯ ವ್ಯಾಪಾರ ಕೇಂದ್ರಗಳಾಗಿದ್ದವು. ಇಲ್ಲಿಂದ ಹತ್ತಿರದ ದೇಶಗಳಿಗೆ ಮತ್ತು ಪಶ್ಚಿಮದ ದೇಶಗಳಿಗೂ ಸಹ ಜನರು ವಿಪಶ್ಯನ ಜ್ಞಾನವನ್ನು ಕೊಂಡೊಯ್ದರು.

ಮುಂಬರುವ ದಿನಗಳಲ್ಲಿ ಈ ಚಾರಿತ್ರಿಕ ವಿಷಯದ ಮೇಲೆ ಹೆಚ್ಚಿನ ಸಂಶೋಧನೆ ಮಾಡುವ ಅಗತ್ಯವಿದೆ. ಅಶೋಕ ಚಕ್ರವರ್ತಿಯ ಮಕ್ಕಳಾದ ಮಹಿಂದ ಮತ್ತು ಸಂಘಮಿತ್ತಾ ತಮ್ಮೊಡನೆ ಈ ಅಮೂಲ್ಯ ಜ್ಞಾನವನ್ನು ಶ್ರೀಲಂಕಾ ದೇಶಕ್ಕೆ ಕೊಂಡೊಯ್ದರು ಎಂಬುದು ಸ್ಪಷ್ಟವಾಗಿರುವ ವಿಷಯ. ಆದರೆ ಮಹಾರಾಷ್ಟ್ರದ ಅಧಿಕ ಸಂಖ್ಯೆಯ ಜನರೂ ಸಹ ತಮ್ಮ ಸಂಸ್ಕೃತಿಯೊಂದಿಗೆ ಅಲ್ಲಿಗೆ ಹೋಗಿ ಕೆಲಸ ಮಾಡಿದ್ದಾರೆ ಎಂದು ನಾನು ನಂಬುತ್ತೇನೆ. ನಾನು ಅಲ್ಲಿಗೆ ಹೋಗಿ ಜನರನ್ನು ಭೇಟಿ ಮಾಡಿದಾಗ ತಿಲಕರತ್ನೆ, ರತವಟ್ಟೆ, ಸೇನಾನಾಯಿಕೆ ಮುಂತಾದ ಮಹಾರಾಷ್ಟ್ರದ ಹೆಸರುಗಳ ತರಹ ಹೆಸರುಗಳನ್ನು ಕಂಡು ಆಶ್ಚರ್ಯವಾಯಿತು. ಈ ಹೆಸರುಗಳು ಎಲ್ಲಿಂದ ಬಂದವು? ವಾಗ್‌ಮಾರೆ, ಸಹಸ್ರಬುದ್ಧೆ, ಮೋರೆ, ಘುಲೆ, ಹಜ್ಜಾರೆ ಮುಂತಾದ ಮಹಾರಾಷ್ಟ್ರದ ಅನೇಕ ಹೆಸರುಗಳು 'ಎ' ಯಿಂದ ಕೊನೆಗೊಳ್ಳುತ್ತವೆ. ಈ ಪ್ರದೇಶದಿಂದ ಜ್ಞಾನವನ್ನು ತೆಗೆದುಕೊಂಡು ಅಲ್ಲಿಗೆ ಹೋದ ಅನೇಕ ಜನರು ಅಲ್ಲಿಯ ಜನಗಳ ಜೊತೆ ಬೆರೆತಿರುವುದನ್ನು ಇದು ಹೇಳುತ್ತದೆ. ಅವರನ್ನು ಗೆಲ್ಲಲು ಇವರು ಹೋಗಲಿಲ್ಲ. ತೆಗೆದುಕೊಳ್ಳಲು ಅಲ್ಲ, ಕೊಡಲು ಹೋದರು.

ಈ ಪ್ರದೇಶವು ಪ್ರಪಂಚದ ಭೂಪಟದ ಮೇಲೆ ನಿಜವಾಗಿಯೂ ಧರ್ಮದ ಒಂದು ದೊಡ್ಡ ಕೇಂದ್ರವಾಗಿದೆ. ಏಳುವುದು ಮತ್ತು ಬೀಳುವುದು ಪ್ರಕೃತಿಯ ನಿಯಮವಾಗಿದೆ. ಹಗಲು ಇರುಳನ್ನು ಅನುಸರಿಸುವಂತೆ, ವಸಂತಕಾಲವು ಚಳಿಗಾಲವನ್ನು ಅನುಸರಿಸುತ್ತದೆ. ಅದೇ ತರಹ ಕಳೆದು ಹೋಗಿದ್ದ ಧರ್ಮದ ಈ ರತ್ನವು ಪುನಃ ವಾಪಾಸ್ಸು ಬಂದಿದೆ ಮತ್ತು ಇಲ್ಲಿಯ ಜನರು, ಬುದ್ಧಿವಂತ ಜನರು, ಹೆಚ್ಚಿನ ಸಂಖ್ಯೆಯಲ್ಲಿ ಇದನ್ನು ಒಪ್ಪಿಕೊಳ್ಳಲು ಪ್ರಾರಂಭಿಸಿದ್ದಾರೆ. ಇದರಿಂದ ನಮ್ಮ ಸಮಾಜಕ್ಕೆ ಉಪಯುಕ್ತವಾದ ಬದಲಾವಣೆಯು ಫಲಿಸುತ್ತಿದೆ.

ಇದು ಒಂದು ಬಹಳ ಸರಳವಾದ, ತರ್ಕಬದ್ಧವಾದ, ವೈಜ್ಞಾನಿಕ ಬೋಧನೆಯಾಗಿದೆ. ಅತಾರ್ಕಿಕ ಮೂಢನಂಬಿಕೆಗಳಿಗೆ ಇದರಲ್ಲಿ ಸ್ಥಳವಿಲ್ಲ. ನೀವೇ ಇದನ್ನು ಪ್ರಯತ್ನಿಸಿ. ನಿರೀಕ್ಷಿತ ಫಲಿತಾಂಶಗಳು ಬರುವವೋ ಇಲ್ಲವೋ ಎಂಬುದನ್ನು ನೋಡಿ. ಬಂದರೆ ಒಪ್ಪಿಕೊಳ್ಳಿ. ಇಲ್ಲದಿದ್ದರೆ ಬಿಟ್ಟು ಬಿಡಿ. ಆದರೆ ನೀವು ಕೆಲಸ ಮಾಡಬೇಕು. ನಿಮಗಾಗಿ ಯಾವ ಗುರುವೂ ಇದನ್ನು ಮಾಡಲು ಸಾಧ್ಯವಿಲ್ಲ. ಯಾರೂ ನಿಮಗೆ ಅನುಗ್ರಹಿಸುವುದಿಲ್ಲ. ಆಚಾರ್ಯರಿಂದ ಏನಾದರೂ ಸಹಾಯವಿದ್ದರೆ, ಅದು ಈ ರೀತಿ ಇರುತ್ತದೆ: "ಈ ಮಾರ್ಗದಲ್ಲಿ ನಾನು ನಡೆದಿದ್ದೇನೆ ಮತ್ತು ಅದರಿಂದ ಪ್ರಯೋಜನ ಪಡೆದಿದ್ದೇನೆ. ನೀವೂ ಸಹ ಈ ಮಾರ್ಗದಲ್ಲಿ ನಡೆಯಿರಿ ಮತ್ತು ನೀವೇ ನೋಡಿರಿ" ಎಂದು ಹೇಳುತ್ತಾರೆ. ಇಷ್ಟು ಸಹಾಯ ಸಾಕು. ಮತ್ತು ನಿಮಗಾಗಿ ನೀವೇ ಧರ್ಮದಲ್ಲಿ ಅಭಿವೃದ್ಧಿ ಹೊಂದಬೇಕು.

ನಿಮ್ಮ ಮನಸ್ಸು ಮಲಿನಗೊಳ್ಳುವುದಕ್ಕೆ ಜವಾಬ್ದಾರರು ಯಾರು? ಯಾವಾಗಲೂ ಅದನ್ನು ತಳಮಳದಲ್ಲಿಟ್ಟಿದ್ದಕ್ಕೆ ಯಾರು ಜವಾಬ್ದಾರರು? ನೀವೇ ಪರಿಶೀಲಿಸಬೇಕು, "ನನ್ನ ಅಜ್ಞಾನದಿಂದ ಅದನ್ನು ಮಾಡಿದೆ, ಇದಕ್ಕೆ ನಾನೊಬ್ಬನೇ ಜವಾಬ್ದಾರ. ಆದ್ದರಿಂದ ಅದನ್ನು ಸುಧಾರಿಸುವ ಜವಾಬ್ದಾರಿಯೂ ನನ್ನದೇ ಆಗಿದೆ."

ನಮ್ಮ ಬಟ್ಟೆಗಳು ಕೊಳೆಯಾದರೆ ಅವನ್ನು ಕೂಡಲೇ ಒಗೆಯುತ್ತೇವೆ. ಅವನ್ನು ಕೊಳಕಾಗಿರಿಸಲು ಯಾರೂ ಇಷ್ಟಪಡುವುದಿಲ್ಲ. ಆದರೆ ಮಲಿನಗೊಂಡ ನಮ್ಮ ಮನಸ್ಸನ್ನು ಶುದ್ಧ ಮಾಡಲು ನಾವು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಇದಕ್ಕೆ ಬದಲಾಗಿ, "ಅವನು ನನಗೆ ಅವಮಾನ ಮಾಡಿದ, ಆದ್ದರಿಂದ ನಾನು ಕೋಪಗೊಂಡೆ" ಎಂದು ಸಮರ್ಥಿಸಿಕೊಳ್ಳುತ್ತೇವೆ. ಅವನು ದುಃಖದಲ್ಲಿದ್ದಾನೆ ಮತ್ತು ಅವನು ತನ್ನ ನಡವಳಿಕೆಯಿಂದ ತನಗೆ ತಾನೇ ಹಾನಿ ಮಾಡಿಕೊಳ್ಳುತ್ತಿದ್ದಾನೆ. ತನಗೆ ತಾನೇ ಮೊದಲು ಹಾನಿ ಮಾಡಿಕೊಳ್ಳದೆ ಬೇರೆ ಯಾರಿಗೂ ಯಾರೂ ಹಾನಿ ಮಾಡಲು ಸಾಧ್ಯವಿಲ್ಲ. ಆದರೆ ಅವನ ದುಃಖದಲ್ಲಿ ನೀನೂ ಏಕೆ ಭಾಗಿಯಾಗುವೆ? ನಿನಗೆ ನೀನೇ ಏಕೆ ಹಾನಿ ಮಾಡಿಕೊಳ್ಳುತ್ತೀಯಾ?

ನಮ್ಮ ಮೂರ್ಖತನಕ್ಕೆ ಮಿತಿಯೇ ಇಲ್ಲ. ನಮ್ಮನ್ನು ಬೈದು ಅವಮಾನಗೊಳಿಸಿ ದುಃಖಿಗಳನ್ನಾಗಿ ಮಾಡಲು ಯಾರೋ ಪ್ರಯತ್ನಿಸಿದರು. "ಸರಿ, ನೀನು ನನ್ನನ್ನು ದುಃಖಿಯಾಗಿ ಮಾಡಲು ಬಯಸಿದ್ದೀಯ. ನಿನ್ನ ಅವಮಾನವನ್ನು ನಾನು ಒಪ್ಪಿಕೊಳ್ಳುತ್ತೇನೆ ಮತ್ತು ದುಃಖಿಯಾಗಿರುತ್ತೇನೆ" ಎಂದು ನಾವು ಹೇಳುತ್ತೇವೆ.

ನಾವೇನು ಮಾಡುತ್ತಿದ್ದೇವೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳುವುದಿಲ್ಲ. ಏಕೆಂದರೆ, ನಮ್ಮೊಳಗಿನ ಸತ್ಯವನ್ನು ನೋಡುವ ಜ್ಞಾನವನ್ನು ನಾವು ಕಳೆದುಕೊಂಡಿದ್ದೇವೆ. ಯಾರು ಏನು ಹೇಳಿದರು, ಅಥವಾ ಇದು ಒಳ್ಳೆಯದು, ಅದು ಒಳ್ಳೆಯದಲ್ಲ ಎಂದು ಹೊರಗಿನ ಘಟನೆಗಳ ಮೇಲೆಯೇ ಯಾವಾಗಲೂ ಕೇಂದ್ರೀಕರಿಸಿರುತ್ತೇವೆ. ಹೊರಗಿನ ಕೆಲವು ವಸ್ತು-ವಿಷಯಗಳು ಸರಿಯಿಲ್ಲ. ಈ ಭಾವನೆ ಹೋಗಲೇಬೇಕು. ಪ್ರಪಂಚದಲ್ಲಿ ಏನನ್ನಾದರೂ ಬದಲಾವಣೆ ಮಾಡುವ ಅಗತ್ಯವಿದ್ದರೆ, ಖಂಡಿತವಾಗಿ ಮಾಡಿ. ಆದರೆ ನಿಮ್ಮ ಮನಸ್ಸಿಗೆ ಕ್ಷೋಭೆ ತರದೆ ಅಥವಾ ಹಾನಿ ಮಾಡದೆ ಮಾಡಿ. ಏನೇ ಸಂಭವಿಸಿದರೂ ಚಿಂತೆಯಿಲ್ಲ, ಎಷ್ಟೇ ಅಹಿತಕರವಾಗಿರಲಿ, ನಾವು ತಳಮಳಗೊಂಡಿದ್ದೇವೆಯೇ ಅಥವಾ ಇಲ್ಲವೇ, ನಾವು ನಮ್ಮ ಮನಸ್ಸಿನ ಸಮತೋಲನವನ್ನು ಕಳೆದುಕೊಂಡಿದ್ದೇವೆಯೇ ಅಥವಾ ಇಲ್ಲವೇ ಎಂಬುದನ್ನು ಮೊದಲು ನಮ್ಮೊಳಗೇ ನಾವು ನೋಡುತ್ತೇವೆ. ಇದನ್ನು ವಿಪಶ್ಯನ ನಮಗೆ ಕಲಿಸುತ್ತದೆ. ಇದಾದ ಮೇಲೆ ನಾವು ಯಾವ ಕ್ರಿಯೆಯನ್ನು ಮಾಡಬೇಕೋ ಅದನ್ನು ಮಾಡುತ್ತೇವೆ. ಆಗ ಆ ಕ್ರಿಯೆಯ ಫಲಿತಾಂಶವು ಒಳ್ಳೆಯದೇ ಆಗಿರುತ್ತದೆ. ಏಕೆಂದರೆ ನಾವು ಆರೋಗ್ಯಕರವಾದ, ಸಮತೋಲನದ, ಸಮತೆಯ ಮನಸ್ಸಿನಿಂದ ಕೆಲಸ ಮಾಡುತ್ತೇವೆ.

ಆರೋಗ್ಯಕರವಾದದ್ದು ಯಾವುದು? ಯಾರು ತನ್ನಲ್ಲಿ ತಾನು ಸ್ಥಾಪಿತಗೊಂಡಿರುತ್ತಾರೋ ಅವರು ಮನಸ್ಸಿನಲ್ಲಿ ಆರೋಗ್ಯದಿಂದಿರುವವರು. ಅಲ್ಲದೇ, ನಿಮ್ಮಲ್ಲಿ ನೀವು ಸ್ಥಾಪಿತಗೊಳ್ಳಲು ಮೊದಲು ನಿಮ್ಮನ್ನು ನೀವು ಅರಿಯಬೇಕು. ಅನುಭವದ ಸ್ತರದಲ್ಲಿ ನಿಮ್ಮನ್ನು ನೀವು ನಿಜವಾಗಿ ಅರಿಯುವುದೇ ವಿಪಶ್ಯನ. ಅನುಭವದ ಮಟ್ಟದಲ್ಲಿ ನಿಮ್ಮನ್ನು ನೀವು ಅರಿಯಲು ಪ್ರಾರಂಭಿಸಿದರೆ, ಆಗ ತಾನೇ ತಾನಾಗಿ ನೀವು ಎಲ್ಲಾ ದುಃಖಗಳಿಂದ ದೂರವಾಗುವಿರಿ.

ಈ ಮಹಾರತ್ನವನ್ನು ನಾವು ಹೊಂದಿದ್ದೇವೆ, ನನ್ನ ಸ್ನೇಹಿತರೆ. ನಿಮ್ಮದೇ

ಲಾಭಕ್ಕಾಗಿ ಇದನ್ನು ಪರೀಕ್ಷಿಸಿ ನೋಡಿ.

....ಮುಂದುವರಿಯುವುದು.

**ಗೋಯಂಕಾಜಿಯವರೊಡನೆ ಪ್ರಶ್ನೋತ್ತರಗಳು**

**ಪ್ರಶ್ನೆ:** ಮನಸ್ಸನ್ನು ಸೂಕ್ಷ್ಮಗ್ರಾಹಿಯಾಗಿ ಮಾಡಲು ನಾವು ಧ್ಯಾನ ಮಾಡುತ್ತೇವೆ ಎಂದು ನೀವು ಹೇಳುತ್ತೀರಿ. ನಾವು ಹೇಗೆ ಮನಸ್ಸನ್ನು ಸೂಕ್ಷ್ಮಗ್ರಾಹಿಯಾಗಿ ಮಾಡುತ್ತೇವೆ?

**ಗೋಯಂಕಾಜಿ:** ನೀವು ಸತ್ಯದ ಜೊತೆಯಿದ್ದರೆ ಮತ್ತು ಅದಕ್ಕೆ ಪ್ರತಿಕ್ರಿಯೆ ಮಾಡದಿದ್ದರೆ ಸಹಜವಾಗಿಯೇ ಮನಸ್ಸು ಸೂಕ್ಷ್ಮಗ್ರಾಹಿಯಾಗುತ್ತದೆ. ಮನಸ್ಸು ಪ್ರತಿಕ್ರಿಯೆ ಮಾಡಿದಾಗ ಅದು ಮೊಂಡಾಗುತ್ತದೆ. ಹೆಚ್ಚು ಹೆಚ್ಚಾದ ಪ್ರತಿಕ್ರಿಯೆ, ಮನಸ್ಸನ್ನು ಹೆಚ್ಚು ಸ್ಥೂಲ ಮಾಡುತ್ತದೆ. ನೀವು ಪ್ರತಿಕ್ರಿಯೆ ಮಾಡದಿದ್ದಾಗ ಅದು ಸಹಜವಾಗಿ ಬಹಳ ಹರಿತವಾಗುತ್ತದೆ ಮತ್ತು ಬಹಳ ಸೂಕ್ಷ್ಮವಾಗುತ್ತದೆ.

**ಪ್ರಶ್ನೆ:** ಮನೆಯಲ್ಲಿ ಧ್ಯಾನ ಮಾಡುವಾಗ ನಾವು ನೋವಿನ ಜೊತೆ ಹೋರಾಡುವುದು ಹೇಗೆ?

**ಗೋಯಂಕಾಜಿ:** ನೀವು ನಿಮ್ಮ ಕುಳಿತಿರುವ ಭಂಗಿಯನ್ನು ಬದಲಾಯಿಸಬಹುದು. ಶಿಬಿರದಲ್ಲಿ ಮಾತ್ರ ಒಂದು ಘಂಟೆಯ ಅಧಿಠ್ಠಾನ (ಅಧಿಷ್ಠಾನ)ದ ಅವಶ್ಯಕತೆಯಿದೆ. ಮನೆಯಲ್ಲಿ ಧ್ಯಾನ ಮಾಡುವಾಗ ಕೆಲ ಸಮಯದ ನಂತರ ಬಹಳ ನೋವಿದೆ ಎಂದು ನಿಮಗೆ ಅನಿಸಿದರೆ, ನಿಮ್ಮ ಭಂಗಿಯನ್ನು ಬದಲಾಯಿಸಬಹುದು. ಅರಿವಿನಿಂದ ಮತ್ತು ನಿಧಾನವಾಗಿ ನಿಮ್ಮ ಭಂಗಿಯನ್ನು ಬದಲಾಯಿಸಿ. ಆದರೆ ಪದೇ ಪದೇ ಭಂಗಿಯನ್ನು ಬದಲಾಯಿಸದೇ ಇರುವಂತೆ ಪ್ರಯತ್ನಿಸಿ.

**ಪ್ರಶ್ನೆ:** ಶಿಬಿರದ ನಂತರವೂ ನಾನು ಸಾಧನೆಯನ್ನು ಮುಂದುವರಿಸಿದರೆ ಮನೆಯಲ್ಲಿಯೂ ಸಹ ಮನಸ್ಸಿನ ಶಸ್ತ್ರ ಚಿಕಿತ್ಸೆ ಮುಂದುವರಿಯುತ್ತದೆಯೇ?

**ಗೋಯಂಕಾಜಿ:** ಹೌದು ಅದು ಮುಂದುವರಿಯುತ್ತದೆ. ಆದರೆ ಆಳವಾದ ಶಸ್ತ್ರ ಚಿಕಿತ್ಸೆಗೆ ನೀವು ಶಿಬಿರಕ್ಕೆ ಬರಲೇಬೇಕು ಅಥವಾ ನೀವೇ ಸ್ವಂತ ಶಿಬಿರ ಮಾಡಿಕೊಳ್ಳಿ. ಬಹಳ ಕಾಲದ ನಿರಂತರ ಅಭ್ಯಾಸ ನಿಮ್ಮನ್ನು ಆಳಕ್ಕೆ ಕೊಂಡೊಯ್ಯುತ್ತದೆ. ಆದರೆ ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಾಯಂಕಾಲ ನೀವು ಅಭ್ಯಾಸ ಮಾಡಿದರೆ ಆ ಅವಧಿಯಲ್ಲಿ ನೀವು ಒಟ್ಟು ಮಾಡಿಕೊಂಡಿದ್ದ ಮಲಿನತೆಗಳನ್ನು ತೊಳೆದುಕೊಳ್ಳುತ್ತೀರಿ.

**ಪ್ರಶ್ನೆ:** ನಾನು ಹಠ ಯೋಗ ಮಾಡಬಹುದೇ?

**ಗೋಯಂಕಾಜಿ:** ಹಠ ಯೋಗ–ಆಸನಗಳು ಮತ್ತು ಪ್ರಾಣಾಯಾಮ – ನಿಮ್ಮ ದೈಹಿಕ ಆರೋಗ್ಯಕ್ಕೆ ಬಹಳ ಒಳ್ಳೆಯದು. ಅದು ಈ ಸಾಧನೆಗೆ ಏನೂ ತೊಂದರೆ ಮಾಡುವುದಿಲ್ಲ. ಮನೆಯಲ್ಲಿ ನೀವು ಹಠ ಯೋಗ ಮಾಡಬಹುದು. ನಿಮ್ಮ ಶ್ವಾಸಕೋಶಗಳನ್ನು ಬಲಿಷ್ಠಗೊಳಿಸಲು ಮತ್ತು ಆರೋಗ್ಯವಾಗಿಡಲು ನೀವು ಪ್ರಾಣಾಯಾಮ ಮಾಡಿದರೆ ಅದರಿಂದೇನೂ ತೊಂದರೆಯಿಲ್ಲ. ಆದರೆ ಹಠ ಯೋಗದ ಹೆಸರಿನಲ್ಲಿ ಮಾಡುವ ಯಾವುದೇ ಧ್ಯಾನವು ಈ ಧ್ಯಾನ ಸಾಧನೆಯ ಜೊತೆಗೆ ಸರಿ ಹೊಂದುವುದಿಲ್ಲ.

**ಪ್ರಶ್ನೆ:** ನಾನು ಹಠ ಯೋಗ ಮಾಡುವುದನ್ನು ಮುಂದುವರಿಸಿದರೆ ವಿವಿಧ ಭಂಗಿಗಳಲ್ಲಿ ವಿಪಶ್ಯನವನ್ನು ಅಭ್ಯಾಸ ಮಾಡುವುದು ಹೇಗೆ?

**ಗೋಯಂಕಾಜಿ:** ನೀವು ಯಾವುದೇ ಭಂಗಿಯಲ್ಲಿದ್ದರೂ ನಿಮ್ಮ ಗಮನವನ್ನು ಒಂದೇ ಬಾರಿಗೆ ದೇಹದ ತುಂಬೆಲ್ಲಾ ಹರಿಸಿಕೊಂಡು ಹೋಗಿ. ಬರೀ ಯೋಗ ಮಾಡುವುದಕ್ಕಿಂತ ಹೆಚ್ಚು ಉಪಯೋಗವಾಗುತ್ತದೆ.

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು: 2017** ಜುಲೈ 12–23, 26–6 ಆಗಸ್ಟ್ 9–20, ಸೆಪ್ಟಂಬರ್ 7–18, ಅಕ್ಟೋಬರ್ 4–15, 18–29, ನವೆಂಬರ್ 15–26, 29–10 ಡಿಸೆಂಬರ್ 13–24.**ಮೂರು ದಿನದ ಶಿಬಿರ:** ಸೆಪ್ಟಂಬರ್ 21–24, 28–31 ಡಿಸೆಂಬರ್.**ಎರಡು ದಿನದ ಶಿಬಿರ:** ನವೆಂಬರ್ 10–12. **ಸತಿಪಟ್ಠಾನ ಶಿಬಿರಗಳು:** ಆಗಸ್ಟ್ 28–5 ಸೆಪ್ಟಂಬರ್, ನವೆಂಬರ್ 1–9. **ವಿಳಾಸ:** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಹತ್ತಿರ ಇಳಿದು ಅದರ ಎದುರು ರಸ್ತೆಯಲ್ಲಿ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ (ಕೆಂಪೇಗೌಡ) ಬಸ್ ನಿಲ್ದಾಣದಿಂದ ನಗರ ಸಾರಿಗೆ ಬಸ್ ಸಂಖ್ಯೆ: 256, 258, 258ಸಿ. ದೂ.: 080–23712377, ಮೊಬೈಲ್: 7829912733, 8861644284, 9972588377,
ಇ–ಮೇಲ್:info@paphulla.dhamma.org; website: www.dhamma.org.

**ಬೆಂಗಳೂರಿನಲ್ಲಿ ಸಾಮೂಹಿಕ ಸಾಧನಾ ಶಿಬಿರಗಳ ಮಾಹಿತಿ**

**ಪ್ರತಿ ಭಾನುವಾರ: ಜಯನಗರ:** ಬೆಳಿಗ್ಗೆ 8.30 ರಿಂದ 9.30ರವರೆಗೆ, ಸುರೇಶ್/ರಾಜೇಶ್ವರಿ – 98867 75401 **ಸರ್ಜಾಪುರ ರಸ್ತೆ:** ಬೆಳಿಗ್ಗೆ 9.00 ರಿಂದ 10.00, ನಿರ್ಮಲ್ ಬೋತ್ರಾ–93412 22999, ಸ್ವಾತಿ–93426 75811, **ಬಸವೇಶ್ವರ ನಗರ** ಬೆಳಿಗ್ಗೆ 8.00 ರಿಂದ 9.00ರವರೆಗೆ, ಶ್ರೀ ಮಂಜುನಾಥ: 098451 71600, ಹೇಮಂತ: 074118 74462, **ಮಲ್ಲೇಶ್ವರಂ:** 8.30ರಿಂದ 9.30ರವರೆಗೆ, ಶ್ರೀ ದಿನೇಶ್ ಕುಮಾರ್–99452 38441 **ಕೆಂಗೇರಿ:** ಸಂಜೆ 4.30ರಿಂದ 5.30ರವರೆಗೆ, ವಸಂತ್ ಜಾಜೋ–98453 95152, 98445 29309. **ಆರ್.ಎಂ.ವಿ. 2ನೇ ಹಂತ:** ಬೆಳಿಗ್ಗೆ 7.50ರಿಂದ 9.00ರವರೆಗೆ, ಶ್ರೀ ತಾರಕ್ ಗೋರಾಡಿಯಾ–99454 58593.

**ಪ್ರತಿ ಶನಿವಾರ: ವಿಜಯನಗರ:** ಸಂಜೆ 6–00 ರಿಂದ 7–00ರವರೆಗೆ, ತುಕಾರಾಮ್–97433 63339, ಪವನ್‌ಕುಮಾರ್–77607 52220.

**ಪ್ರತಿ ಮೊದಲ ಭಾನುವಾರ: ವೈಟ್‌ಫೀಲ್ಡ್:** ಬೆಳಿಗ್ಗೆ 9–30 ರಿಂದ 10–30ರವರೆಗೆ, ಶ್ರೀಮತಿ ವಲ್ಲರಿ/ರಾಜೇಶ್ ಮೊ.: 97403 22447

ಬೆಂಗಳೂರಿನಲ್ಲಿ ಸಾಮೂಹಿಕ ಸಾಧನೆಗಳ ಬಗ್ಗೆ ಮಾಹಿತಿ ತಿಳಿಯಲು ವೆಬ್ ವಿಳಾಸ: http://www.paphulla.dhamma.org/os/paphulla sittings.htm

**ಒಂದು ದಿನದ ಶಿಬಿರಗಳ ಮಾಹಿತಿ**

**ಬೆಂಗಳೂರು:** ಪ್ರತಿ ಭಾನುವಾರ 10 ರಿಂದ 4 ಗಂಟೆ, ಧಮ್ಮ ಪಫುಲ್ಲ, ಆಲೂರು. **ಮೈಸೂರು:** ಪ್ರತಿ ತಿಂಗಳು 4ನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9481149553, 99801005309. **ಉಡುಪಿ:** ಪ್ರತಿ ತಿಂಗಳು ಎರಡನೇ ಭಾನುವಾರ. ಸಂಪರ್ಕ ಸಂಖ್ಯೆಗಳು: 9980897955 / 9449773942 9481149553. **ದಾವಣಗೆರೆ:** ಪ್ರತಿ ತಿಂಗಳು ಕೊನೆ ಭಾನುವಾರ. ಸಂಪರ್ಕ ಸಂಖ್ಯೆಗಳು: 9844245111 / 9986962762 9448588789 **ಹುಬ್ಬಳ್ಳಿ:** ಪ್ರತಿ ತಿಂಗಳು ಮೂರನೇ ಭಾನುವಾರ. ಸಂಪರ್ಕ ಸಂಖ್ಯೆ: 9880661506

**10 ದಿನದ ಶಿಬಿರ ಆಯೋಜಿಸುವವರು ಸಲಹೆ, ಸೂಚನೆಗಳಿಗಾಗಿ ಸಂಪರ್ಕಿಸಿ : ಸಂತೋಷ ಧರ್ಮರಾಜ್, ಬೆಂಗಳೂರು. ಮೊಬೈಲ್: 8762086089**

**10ದಿನದ ಶಿಬಿರದಲ್ಲಿ ಭಾಗವಹಿಸಲು ಆನ್‌ಲೈನ್ ನೋಂದಣಿ ಸಹಾಯಕ್ಕಾಗಿ ಸಂಪರ್ಕಿಸಿ.** ಬಳ್ಳಾರಿ: ಎ.ಮಲ್ಲಿಕಾರ್ಜುನಪ್ಪ, ಮೊ.ಸಂ. 9449511217.
ಬೆಳಗಾವಿ: ವೀರನಗೌಡ ವಿ.ಸಾರನಾಡಗೌಡ್ರ, ಮೊ.ಸಂ.9902657335.
ದಾವಣಗೆರೆ: ಉದಯ ಶಿವಕುಮಾರ್, ಮೊ.ಸಂ. 9739314581(ಮೆಸೇಜ್ ಮಾಡಿ, ಅವರೇ ಕರೆ ಮಾಡುತ್ತಾರೆ.) ಜಿ.ಟಿ.ಗೋವಿಂದಪ್ಪ, ಮೊ.ಸಂ.9448588789.

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು:** ಬಿ.ಪ್ರದೀಪ ಕುಮಾರ, **ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070.
**ಗೌರವ ಸಂಪಾದಕರು:** ಜಿ.ಟಿ. ಗೋವಿಂದಪ್ಪ

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor:** G.T. Govindappa,

ತೆರೆದ–ಅಂಚೆ

**ಮುದ್ರಿತ ವಿಷಯ**

ಗೆ,

ಇಂದ:

**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**

#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.